# ಶಾಂತಿಧಾಮ - ೨

◆ ಮೂಲ: ಸ್ವಾಮಿ ಭಜನಾನಂದ    ಅನುವಾದ ಡಾ.ಸಿ.ಪಿ.ಕೃಷ್ಣಕುಮಾರ್

(ಹಿಂದಿನ ಸಂಚಿಕೆಯಿಂದ ಮುಂದುವರೆದುದು)

## ಸಂತುಲಿತ ಮತ್ತು ದೀಪ್ತ ವ್ಯಕ್ತಿತ್ವ

ನಾನು ಬೆಂಗಳೂರು ಕೇಂದ್ರದ ಮಠವನ್ನು ಸೇರಲು ಆಯ್ಕೆ ಮಾಡಿಕೊಂಡದ್ದಕ್ಕೆ ಮುಖ್ಯ ಕಾರಣವೇನೆಂದರೆ, ಪೂಜ್ಯ ಯತೀಶ್ವರಾನಂದಜಿ ಮಹಾರಾಜರೊಡನೆ ವಾಸಿಸುವ ಮತ್ತು ಅವರ ಸೇವೆ ಮಾಡುವ ಅವಕಾಶ ಅದರಿಂದ ಲಭಿಸುತ್ತದೆ ಎಂಬುದು. ಸಹಜವಾಗಿಯೇ ನನ್ನ ಬೆಂಗಳೂರು ವಾಸದ ಆರಂಭದ ವರ್ಷಗಳ ಅತ್ಯಂತ ಸ್ಮರಣೀಯ ಭಾಗವೆಂದರೆ, ಅವರೊಡನೆ ನನ್ನ ಸಾಹಚರ್ಯ.

ಸ್ವಾಮಿ ವಿವೇಕಾನಂದರನ್ನು ಒಮ್ಮೆ ಯಾರೋ ಕೇಳಿದರು: "ಚಾರಿತ್ರ್ಯದ ಸಾಮರಸ್ಯಪೂರ್ಣ ಅಭಿವೃದ್ಧಿಯನ್ನು ಅತ್ಯುತ್ತಮವಾಗಿ ಸಾಧಿಸುವುದು ಹೇಗೆ?" ಸ್ವಾಮಿಜಿ ಉತ್ತರಿಸಿದರು: "ಹಾಗೆ ಚಾರಿತ್ರ್ಯ ವೃದ್ಧಿಗೊಂಡಿರುವ ವ್ಯಕ್ತಿಗಳ ಸಂಸರ್ಗದಿಂದ." ನಾನು ಪೂಜ್ಯ ಯತೀಶ್ವರಾನಂದಜಿ ಮಹಾರಾಜರ ಸಂಪರ್ಕಕ್ಕೆ ಹೆಚ್ಚು ಹೆಚ್ಚು ಬಂದಂತೆಲ್ಲ ಈ ಹೇಳಿಕೆಯ ಸತ್ಯ ನನಗೆ ಸ್ಪಷ್ಟವಾಯಿತು. ಸ್ವಾಮಿ ವಿವೇಕಾನಂದರ ಪರಿಕಲ್ಪನೆಯ ಆದರ್ಶ ವ್ಯಕ್ತಿಯೆಂದರೆ, ವಿಚಾರ, ಪ್ರೇಮ, ಧ್ಯಾನ, ಕಾರ್ಯದಕ್ಷತೆಗಳನ್ನು ಸಮಪ್ರಮಾಣದಲ್ಲಿ ಬೆಳೆಸಿಕೊಂಡಿರುವವರು. ಈ ಬಗೆಗೆ ಮಾತನಾಡುತ್ತ ಸ್ವಾಮಿಜಿ ಹೇಳಿದ್ದರು: "ದೇವರ ದಯೆಯಿಂದ ಎಲ್ಲರಲ್ಲಿಯೂ ಜ್ಞಾನ, ಯೋಗ, ಭಕ್ತಿ, ಕರ್ಮಗಳು ಸಮವಾಗಿ ಹೊಂದಿಕೊಂಡಿದ್ದರೆ! ಇದೇ ಆದರ್ಶ; ನನ್ನ ದೃಷ್ಟಿಯಲ್ಲಿ ಇದೇ ಪರಿಪೂರ್ಣ ವ್ಯಕ್ತಿಯೊಬ್ಬನ ಆದರ್ಶ"(ಕೃತಿಶ್ರೇಣಿ, ಸಂ.೨; ಪು.೨೯). ಈ ಆದರ್ಶವನ್ನು ತಮ್ಮ ಬದುಕಿನಲ್ಲಿ ಬಹಳಮಟ್ಟಿಗೆ ಸಾಧಿಸಿದ ವಿರಳ ವ್ಯಕ್ತಿಗಳಲ್ಲಿ ಪೂಜ್ಯ ಯತೀಶ್ವರಾನಂದಜಿ ಮಹಾರಾಜರು ಒಬ್ಬರಾಗಿದ್ದರು. ಸಮತೋಲನ, ಸಮನ್ವಯ, ಸಾಮರಸ್ಯ—ಇವು ಅವರ ವ್ಯಕ್ತಿತ್ವದ ಸಹಜ ಗುಣಗಳಾಗಿದ್ದುವು.

ಆದರೂ, ಇತರ ಸಂನ್ಯಾಸಿಗಳಿಗಿಂತ ಬೇರೆಯಾದ ಅವರ ವ್ಯಕ್ತಿತ್ವದ ಅತ್ಯಂತ ಗಮನಾರ್ಹ ಲಕ್ಷಣವೆಂದರೆ, ಅವರು ಹೊರಸೂಸುತ್ತಿದ್ದ ಆಧ್ಯಾತ್ಮಿಕ ಪ್ರಭಾವಳಿ. ಸ್ವಭಾವತಃ ಉನ್ನತ ಪ್ರಜ್ಞಾಸ್ತರವೊಂದರಲ್ಲಿ ಅವರು ಬದುಕುತ್ತಿದ್ದರು ಮತ್ತು ತಾವಿದ್ದಲ್ಲೆಲ್ಲ ಅಂಥ ಆಧ್ಯಾತ್ಮಿಕ ವಾತಾವರಣವೊಂದನ್ನು ಸೃಜಿಸುತ್ತಿದ್ದರು. ಅವರು ಉನ್ನತ ಆಧ್ಯಾತ್ಮಿಕ ಭೂಮಿಕೆಯೊಂದರಿಂದ ಜನರನ್ನು ಪ್ರಭಾವಿಸಿ, ಅವರೊಡನೆ ಕ್ರಿಯಾತ್ಮಕ ಸಂಬಂಧಗಳನ್ನು ಸ್ಥಾಪಿಸುತ್ತಿದ್ದರು.



*ಪೂಜ್ಯ ಯತೀಶ್ವರಾನಂದಜಿ ಮಹಾರಾಜ್*

ಜೀವನದ ಮೂಲಭೂತ ಅಸ್ತಿತ್ವಸಂಬಂಧಿ ಸಮಸ್ಯೆಗಳಿಗೆ ಆಧ್ಯಾತ್ಮಿಕ ಪರಿಹಾರ ಮಾತ್ರ ಇರುವುದರಿಂದ, ಗಾಢ ಆಧ್ಯಾತ್ಮಿಕ ಜೀವನ ನಡೆಸುವಂತೆ ಮತ್ತು ಬದುಕಿನ ಅಂತಿಮ ಧ್ಯೇಯವನ್ನು ಸಾಧಿಸುವಂತೆ ಜನರನ್ನು ಅವರು ಯಾವಾಗಲೂ ಪ್ರೋತ್ಸಾಹಿಸುತ್ತಿದ್ದರು. ಬೆಂಗಳೂರು ಕೇಂದ್ರದ ಸೋದರ ಸಂನ್ಯಾಸಿಗಳಿಗೆ ರಾತ್ರಿ ತರಗತಿಯಲ್ಲಿ ಪೂಜ್ಯ ಮಹಾರಾಜ್ ಅವರು ಸಾಮಾನ್ಯವಾಗಿ ಕೇಳುತ್ತಿದ್ದ ಆಧ್ಯಾತ್ಮಿಕ ಜೀವನದ ಮೂಲಭೂತ ಪ್ರಶ್ನೆಗಳಲ್ಲಿ ಕೆಲವು ಹೀಗಿದ್ದುವು:

* **ನೀವು ಮಠ ಸೇರಿದ್ದೇಕೆ?**
* **ಸಂನ್ಯಾಸಜೀವನದಲ್ಲಿ ಅಧ್ಯಯನದ ಸ್ಥಾನವೇನು?**
* **ಪೂರ್ಣ ಬ್ರಹ್ಮಚರ್ಯವನ್ನು ಪಾಲಿಸುವುದೆಂತು?**
* **ಮನಸ್ಸನ್ನು ಯಾವಾಗಲೂ ಉನ್ನತ ಭೂಮಿಕೆಯಲ್ಲಿರಿಸುವುದು ಹೇಗೆ?**
* **ನಿಮ್ಮ ಪ್ರಜ್ಞೆಯನ್ನು ಪರಿವರ್ತಿಸುವುದು ಹೇಗೆ?**
* **ನಿಮ್ಮ ಪ್ರಜ್ಞೆಯನ್ನು ವಿಕಾಸಗೊಳಿಸುವುದು ಹೇಗೆ?**
* **ಶ್ರೀರಾಮಕೃಷ್ಣರು ಯಾರು? (ಶ್ರೀರಾಮಕೃಷ್ಣರನ್ನು ಮಾನವ ಜೀವಿ ಎಂದಲ್ಲ, ಪರಮಾತ್ಮನೆಂದು ಪರಿಗಣಿಸಬೇಕೆಂದು ಪೂಜ್ಯ ಮಹಾರಾಜ್ ಅವರು ನಮಗೆ ತಿಳಿಸುತ್ತಿದ್ದರು.)**

ಸಂನ್ಯಾಸ ಜೀವನದ ಬಗೆಗೆ ಪೂಜ್ಯ ಮಹಾರಾಜರಿಗಿದ್ದ ಉನ್ನತ ಕಲ್ಪನೆ ಎಂತಹುದು, ಸೋದರ ಸಂನ್ಯಾಸಿಗಳಿಂದ ಅವರು ನಿರೀಕ್ಷಿಸಿದ ಜೀವನದ ಔನ್ನತ್ಯ ಎಂತಹುದು ಎಂಬುದನ್ನು ಈ ಪ್ರಶ್ನೆಗಳು ಸೂಚಿಸುತ್ತವೆ.

**ವಿವೇಕದ ಹೊನ್ನ ಗಟ್ಟಿಗಳು**

ಸರಿಯಾದ ಪ್ರಶ್ನೆಗಳನ್ನು ರೂಪಿಸಬೇಕಾದರೆ, ಅಗತ್ಯವಾದ ಜ್ಞಾನ ಮತ್ತು ಉತ್ತರಗಳ ನಿಜವಾದ ಅರ್ಥವನ್ನು ಜೀರ್ಣಿಸಿಕೊಳ್ಳುವ ಪರಿಪಾಕ ಕೂಡ ಇರಬೇಕು. ನನ್ನ ಸಂನ್ಯಾಸ ಜೀವನದ ಪ್ರಾರಂಭದ ವರ್ಷಗಳಲ್ಲಿ ನನಗೆ ಎರಡೂ ಇರಲಿಲ್ಲ. ಹಾಗಾಗಿ, ನನಗೆ ನೆನಪಿರುವ ಮಟ್ಟಿಗೆ, ನಾನು ಪೂಜ್ಯ ಯತೀಶ್ವರಾನಂದಜಿಯವರಿಗೆ ಯಾವುದೇ ಪ್ರಶ್ನೆಯನ್ನು ಎಂದೂ ಕೇಳಲಿಲ್ಲ. ಅವರಿಂದ ನಾನು ಪಡೆದ ತಿಳಿವಳಿಕೆಯೇನಿದ್ದರೂ ನನ್ನ ಒಳಿತಿಗಾಗಿ ಅವರು ತಮ್ಮ ಸ್ವಂತ ಪ್ರೇರಣೆಯಿಂದ ಕೊಟ್ಟದ್ದು. ಈ ಸೂಚನೆಗಳಲ್ಲಿ ಕೆಲವು ವೈಯಕ್ತಿಕ ಸ್ವರೂಪದವಾಗಿದ್ದು, ಇಲ್ಲಿ ಅವನ್ನು ಉಲ್ಲೇಖಿಸುವುದು ಸಾಧುವಲ್ಲ. ಅವುಗಳಲ್ಲಿ ಸಾಮಾನ್ಯ ಆಸಕ್ತಿ ಉಂಟುಮಾಡಬಹುದಾದ ಎರಡು ಮೂರನ್ನು ಇಲ್ಲಿ ಉಲ್ಲೇಖಿಸಲಾಗಿದೆ.

ನಾನು ಮಠಕ್ಕೆ ಸೇರಿದ ಕೆಲವು ತಿಂಗಳ ಬಳಿಕ, ಪೂಜ್ಯ ಮಹಾರಾಜ್ ಒಂದು ದಿನ ನನ್ನನ್ನು ಕೇಳಿದರು, "ನಿನಗೇನಾದರೂ ಸಮಸ್ಯೆಗಳಿವೆಯೇ?" ನಾನು ಉತ್ತರಿಸಿದೆ, "ಅಂಥ ಸಮಸ್ಯೆಗಳೇನಿಲ್ಲ. ಆದರೆ ಮಠಕ್ಕೆ ಸೇರುವ ಮುನ್ನ ನನಗೆ ಬಹಳ ಜ್ಞಾನಾಸಕ್ತಿಯಿತ್ತು; ಸಂಶೋಧನೆಯ ಬಯಕೆಯಿತ್ತು. ಇಲ್ಲಿ ಸಂಶೋಧನೆಯ ಮನೋಧರ್ಮವಿಲ್ಲ." ಕೂಡಲೆ ಬಂತು ಮಹಾರಾಜ್ ಅವರ ಭರವಸೆಯ ಮಾತು: 'ನೋಡು, ಆಧ್ಯಾತ್ಮಿಕ ಜೀವನದಲ್ಲಿ ಸಂಶೋಧನೆಗೆ ಅಪಾರ ಅವಕಾಶವಿದೆ." ಅದು ನನ್ನ ಮನಸ್ಸಿನಲ್ಲಿ ನೂತನ ದೃಷ್ಟಿಕೋನವೊಂದನ್ನು ತೆರೆಯಿತು. ನಾವು ಪುಸ್ತಕಗಳಲ್ಲಿ ಓದುವ ಧ್ಯಾನ ಮತ್ತಿತರ ಆಧ್ಯಾತ್ಮಿಕ ಅನುಷ್ಠಾನ ವಿವರಣೆಗಳು ಕೇವಲ ಸಾಧಾರಣೀಕರಣಗಳೆಂಬುದು ನನಗೆ ಅರಿವಾಯಿತು. ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಸ್ವಂತ ಪಥವನ್ನು ತನ್ನ ಪ್ರಯತ್ನದಿಂದಲೇ ಕಂಡುಕೊಳ್ಳಬೇಕು ಮತ್ತು ತನ್ನ ಆತ್ಮದಲ್ಲಿ ನಡೆಯುವ ಆಧ್ಯಾತ್ಮಿಕ ಅನಾವರಣದ ವಿಶಿಷ್ಟ ರೀತಿಯನ್ನು ಅರ್ಥಮಾಡಿಕೊಳ್ಳಬೇಕು. ಇದು ಬೃಹದಾರಣ್ಯಕ ಉಪನಿಷತ್ತಿನ ಮಂತ್ರದಲ್ಲಿ ಸೂಚಿತವಾಗಿದೆ: **ಅಣುಃ ಪಂಥಾ ವಿತತಃ ಪುರಾಣೋ, ಮಾಂ ಸ್ಪೃಷ್ಟೋಽನುವಿತ್ತೋ ಮಯೈವ** ("ಪುರಾತನವೂ, ಸೂಕ್ಷ್ಮವೂ, ವಿಶಾಲವೂ ಆದ ಮಾರ್ಗ ನನ್ನ ವಶದಲ್ಲಿದೆ; ನಾನೇ ಅದನ್ನು ಕಂಡುಹಿಡಿದಿದ್ದೇನೆ." ೪.೪.೮)

ಪ್ರತಿಯೊಬ್ಬರೂ ಕೆಲವು ಪ್ರವೃತ್ತಿಗಳ ಸಹಿತ ಹುಟ್ಟಿರುತ್ತಾರೆ. ಅವು ಪೂರ್ವಜನ್ಮದಿಂದ ಮುಂದುವರಿದವಾಗಿರಬಹುದು. ಹಿಮಾಲಯದ ಗುಹೆಯೊಂದರಲ್ಲಿ ವಾಸಮಾಡಬೇಕೆಂಬ ಬಯಕೆ ನನಗೆ ಬಾಲ್ಯದಿಂದಲೂ ಇದ್ದು, ಹಿಮಾಲಯ ಚಾರಣದ ಬಗೆಗಿನ ಪುಸ್ತಕಗಳನ್ನೂ, ಲೇಖನಗಳನ್ನೂ ಅತ್ಯಾಸಕ್ತಿಯಿಂದ ಓದುತ್ತಿದ್ದೆ. ಈ ಆಸೆ, ನಾನು ಮಠವನ್ನು ಸೇರಿದ ಮೇಲೂ ಉಳಿದುಕೊಂಡಿತ್ತು. ಅದನ್ನು ಕುರಿತು ನಾನು ಯಾರಿಗೂ ಹೇಳದಿದ್ದರೂ, ಪೂಜ್ಯ ಮಹಾರಾಜ್ ಅವರು ಅದನ್ನು ಗ್ರಹಿಸಿದಂತೆ ತೋರಿತು. ನಾನು ಮಠವನ್ನು ಸೇರಿದ ಅನತಿ ಕಾಲದಲ್ಲೇ ಅವರು ನನ್ನನ್ನು ತಮ್ಮ ಕೊಠಡಿಗೆ ಕರೆದು, ರಾಮಕೃಷ್ಣ ಮಠದ ಆದರ್ಶಗಳನ್ನೂ, ಕಾಯಕ-ಪೂಜೆಗಳನ್ನೂ ಒಂದುಗೂಡಿಸಬೇಕೆಂಬ ಸ್ವಾಮಿ ಬ್ರಹ್ಮಾನಂದರ ಸಲಹೆಯನ್ನೂ, ತಮ್ಮ ಸಾಧನೆಯ ಆರಂಭದ ವರ್ಷಗಳನ್ನೂ ಕುರಿತು ದೀರ್ಘವಾಗಿ ಮಾತನಾಡಿದರು. ಹೀಗೆ ಮಾತು ಮುಗಿಸಿದರು: "ನೀನೀಗ ಅಲೆಮಾರಿ ಬದುಕಿನ ಬಗೆಗೆ ಆಲೋಚಿಸಿದರೆ, ನೀನೊಬ್ಬ ಭಿಕ್ಷುಕನಾಗುವೆಯಷ್ಟೆ. ಒಂದು ಸ್ಥಳದಲ್ಲಿದ್ದುಕೊಂಡು, ನಿನ್ನ ಆಧ್ಯಾತ್ಮಿಕ ಜೀವನವನ್ನು ನಿರ್ಮಿಸಿಕೊ." ಅಂದಿನಿಂದ ನಾನು ಗುಹಾವಾಸದ ಯೋಜನೆಯನ್ನು ನನ್ನ ಮನಸ್ಸಿನಿಂದ ಬಹಿಷ್ಕರಿಸಿ, ಒಂದು ಸ್ಥಳದಲ್ಲಿ ಉಳಿದುಕೊಂಡು ನನ್ನ ಆಧ್ಯಾತ್ಮಿಕ ಬದುಕನ್ನು ಕಟ್ಟಿಕೊಳ್ಳುವಂತೆ ಮಹಾರಾಜ್ ನೀಡಿದ ಹಿತವಚನವನ್ನು ಅನುಸರಿಸಲು ಪ್ರಯತ್ನಿಸಿದ್ದೇನೆ.

ಮಠವನ್ನು ಸೇರುವ ಮುನ್ನ ನನಗೆ ಪ್ರಾರ್ಥನೆ, ಧ್ಯಾನ ಮುಂತಾದ ಆಧ್ಯಾತ್ಮಿಕ ಅನುಷ್ಠಾನಗಳಿಗೆ ಬಹಳಷ್ಟು ಸಮಯ ದೊರಕುತ್ತಿತ್ತು. ಆದರೆ ಬೆಂಗಳೂರು ಕೇಂದ್ರದಲ್ಲಿ ಮಾಡಬೇಕಾದ ಕೆಲಸ ಬಹಳವಿದ್ದು, ಧ್ಯಾನಾಭ್ಯಾಸಗಳಿಗೆ ಹೆಚ್ಚು ಕಾಲ ಉಳಿಯುತ್ತಿರಲಿಲ್ಲ. ಹೊಸ ಸನ್ನಿವೇಶಕ್ಕೆ ನಾನು ಹೊಂದಿಕೊಳ್ಳಲು ಯತ್ನಿಸಿದೆ; ಆದರೆ ಸ್ವಲ್ಪ ಕಾಲದ ಬಳಿಕ ಅತೃಪ್ತಿಯನ್ನು ಅನುಭವಿಸತೊಡಗಿದೆ. ಒಂದು ಬೆಳಗ್ಗೆ ಅಡುಗೆಮನೆಯಲ್ಲಿ ನಾನು ತರಕಾರಿ ಅಣಿಗೊಳಿಸುತ್ತಿದ್ದಾಗ, ಪೂಜ್ಯ ಮಹಾರಾಜ್ ಅಲ್ಲಿಗೆ ಬಂದರು. ಅಡುಗೆ ಮನೆ ಬಾಗಿಲ ಹೊರಗೆ ನಿಂತು ಅವರು ಹೇಳಿದರು: "ನೋಡು, ಶ್ರೀಗುರು ಮಹಾರಾಜ್ ಅವರಿಗಾಗಿ ನೀನು ನಿಃಸ್ವಾರ್ಥ ಕಾರ್ಯ ಮಾಡು ವಾಗ, ಯಾವುದೋ ಶಕ್ತಿ ಬಂದು ನಿನ್ನನ್ನು ಮೇಲೆತ್ತುವುದು." ಇದು ನನಗೆ ಕರ್ಮಯೋಗದ ಬಗ್ಗೆ ಹೊಸ ಅರ್ಥಗ್ರಹಿಕೆ ಯನ್ನು ನೀಡಿತು.

ಅನಂತರ, ಸಾಧನೆಯ ಆರಂಭದ ವರ್ಷಗಳಲ್ಲಿ ಅತ್ಯಂತ ಮುಖ್ಯ ಅಗತ್ಯಗಳೆಂದರೆ ಚಿತ್ತಶುದ್ಧಿ ಮತ್ತು ಮನಸ್ಸನ್ನು ದೇವರತ್ತ ತಿರುಗಿಸುವುದು ಎಂದು, ಮಾತುಕತೆಯ ನಡುವೆ, ಮಹಾರಾಜ್ ವಿವರಿಸಿದರು. ಚಿತ್ತೈಕಾಗ್ರತೆ ಅಷ್ಟೊಂದು ಮುಖ್ಯವಲ್ಲ; ವಾಸ್ತವವಾಗಿ, ಏಕಾಗ್ರಗೊಳಿಸಿದ ಅಶುದ್ಧ ಮನಸ್ಸು

ಸಾಕಷ್ಟು ತೊಂದರೆ ಕೊಡಬಲ್ಲುದು. ಪ್ರಾರ್ಥನೆಯನ್ನು ಅನುಷ್ಠಾನ ಮಾಡಬೇಕೆಂದೂ ಅವರು ನನಗೆ ತಿಳಿಸಿದರು. ಸಮಸ್ಯೆಗಳು ಮತ್ತು ಸಂಕಷ್ಟಗಳು ಎದುರಾದಾಗ, ನಾನು ಮತ್ತಷ್ಟು ಪ್ರಾರ್ಥಿಸಬೇಕು. ವಿಪತ್ತುಗಳನ್ನು ಭಗವಂತನತ್ತ ಚಲಿಸುವ ಉಪಕರಣಗಳನ್ನಾಗಿ ಪರಿವರ್ತಿಸಿಕೊಳ್ಳಬೇಕು. "ಪ್ರತಿಯೊಂದು ಚುಚ್ಚು ಮತ್ತು ಒದೆತ ನಿನ್ನ ಮನಸ್ಸನ್ನು ದೇವರತ್ತ ಇನ್ನಷ್ಟು ತಿರುಗಿಸಬೇಕು" ಎಂದು ಅವರು ನುಡಿದರು. ಮುಕ್ತಾಯರೂಪವಾಗಿ ಅವರು ಹೇಳಿದರು, "ಅನವಶ್ಯಕ ಅತೃಪ್ತಿಗೆ ಎಡೆಗೊಡಬೇಡ. ಶ್ರೀಗುರುಮಹಾರಾಜರಲ್ಲಿ ಮತ್ತಷ್ಟು ಶ್ರದ್ಧೆಯನ್ನಿಡು."

ಸಂನ್ಯಾಸಜೀವನದಲ್ಲಿ ಅಧ್ಯಯನಕ್ಕೆ ಅತಿಶಯ ಮಹತ್ತ್ವ ಕೊಡುತ್ತಿದ್ದರು, ಪೂಜ್ಯ ಮಹಾರಾಜ್. ಆಶ್ರಮದ ಹೊಸಬರಿಗೆ ಸಂಸ್ಕೃತ ಹಾಗೂ ಪವಿತ್ರ ಗ್ರಂಥಗಳನ್ನು ಕಲಿಸಲು ಪಂಡಿತರೊಬ್ಬರನ್ನು ಗೊತ್ತುಮಾಡಲಾಗಿತ್ತು. ಆ ಕಾಲದ ಪ್ರಸಿದ್ಧ ಧಾರ್ಮಿಕ ಗುರುವೊಬ್ಬರ ಪ್ರಭಾವಕ್ಕೊಳಗಾಗಿದ್ದ ಹೊಸಶಿಷ್ಯನೊಬ್ಬ ಮಹಾರಾಜ್ ಅವರಲ್ಲಿಗೆ ಹೋಗಿ, ಪಂಡಿತರ ತರಗತಿಗಳಿಗೆ ತಾನು ಇನ್ನು ಮುಂದೆ ಹಾಜರಾಗಬಯಸುವುದಿಲ್ಲವೆಂದು ಹೇಳಿದ. ಅಂದು ರಾತ್ರಿ ಊಟವಾದಮೇಲೆ, ಅಧ್ಯಾತ್ಮ ಜೀವನದಲ್ಲಿ ಅಧ್ಯಯನಗಳ ಪ್ರಾಮುಖ್ಯವನ್ನು ಕುರಿತು ಮಹಾರಾಜ್ ದೀರ್ಘ ಉಪನ್ಯಾಸವನ್ನಿತ್ತರು. ಅವರು ಒತ್ತಿ ಹೇಳಿದ ಅನೇಕ ಮುಖ್ಯಾಂಶಗಳಲ್ಲಿ ಒಂದೆಂದರೆ, ನಾವು ಧ್ಯಾನಾನುಷ್ಠಾನದಲ್ಲಿ ತೊಡಗದೇ ಇರುವಾಗ, ಉನ್ನತ ಭೂಮಿಕೆಯಲ್ಲಿ ಉಳಿಯಲು ಅಧ್ಯಯನಗಳು ಮನಸ್ಸಿಗೆ ನೆರವಾಗುತ್ತವೆ ಎಂಬುದು.

ಮತ್ತೊಂದು ದಿವಸ ಯಾವುದೋ ಕೆಲಸ ಮಾಡಲು ನಾನು ಅವರ ಕೊಠಡಿಗೆ ಹೋದಾಗ, ಅವರು ನನ್ನತ್ತ ನೋಡಿ, ಗಂಭೀರ ಧ್ವನಿಯಲ್ಲಿ ಹೇಳಿದರು: "ಸ್ವೀಕರಣವು ತ್ಯಾಗಕ್ಕಿಂತ ದೊಡ್ಡದು." ಇದನ್ನವರು ಮೂರು ಸಲ ಹೇಳಿದರು; ಮತ್ತೇನನ್ನೂ ಹೇಳದೆ, ನನ್ನನ್ನು ಗೊಂದಲದ ಸ್ಥಿತಿಗೆ ದೂಡುತ್ತ, ತಮ್ಮ ಕೆಲಸವನ್ನು ಮುಂದುವರಿಸಿದರು. ಈ ಒಗಟಿನಂಥ ಸೂಕ್ತಿಯ ಬಗೆಗೆ ನಾನು ಎಷ್ಟೋ ವರ್ಷ ಚಿಂತನ ಮಾಡಿದೆನೆಂಬುದನ್ನು ನಾನಿಲ್ಲಿ ಸೇರಿಸಬೇಕು.

**ಕರ್ಣಾಟಕದ ಆಧ್ಯಾತ್ಮಿಕ ಸಂಸ್ಕೃತಿ**

ಕರ್ಣಾಟಕದ ಸಂಸ್ಕೃತಿಯನ್ನು ಅರಿಯಲು ಮತ್ತು ಅದರಿಂದ ಲಾಭ ಪಡೆಯಲು ನನಗೆ ಬೆಂಗಳೂರು ಮಠ ನೀಡಿದ ಅವಕಾಶವನ್ನು ಉಲ್ಲೇಖಿಸದೆ ಅಲ್ಲಿನ ನನ್ನ ಬದುಕಿನ ಈ ವಿವರಣೆಯನ್ನು ಮುಗಿಸಲಾರೆ. ಚಾಲುಕ್ಯ, ಗಂಗ, ಕದಂಬ, ಹೊಯ್ಸಳ, ವಿಜಯನಗರ ಮತ್ತು ಇತರ ಸಾಮ್ರಾಜ್ಯಗಳ ಆಶ್ರಯದಲ್ಲಿ ಕರ್ಣಾಟಕ ಮಹಾಸಂಸ್ಕೃತಿಯೊಂದನ್ನು ರೂಪಿಸಿತು. ಒಟ್ಟಿನಲ್ಲಿ ಸ್ವಾಮಿಜಿ ಭಾರತೀಯ ಸಂಸ್ಕೃತಿಗೆ ಸಂಬಂಧಿಸಿದಂತೆ ಸೂಚಿಸಿದ ಹಾಗೆ ಅಧ್ಯಾತ್ಮವೇ ಕರ್ಣಾಟಕ ಸಂಸ್ಕೃತಿಯ ತಿರುಳು ಮತ್ತು ಜೀವಕೇಂದ್ರವನ್ನು ರೂಪಿಸುತ್ತದೆ. ಆದರೂ ಅತ್ಯಂತ ಪ್ರಭಾವಶಾಲಿಯಾದ ಸಂಗತಿಯೇನೆಂದರೆ ಈ ಅಧ್ಯಾತ್ಮ ಎಲ್ಲ ಸಾಮಾಜಿಕ ಅಡ್ಡಗೋಡೆಗಳನ್ನೂ ಮೀರಿ, ದೀನದಲಿತ ಜನಸಮುದಾಯದ ನಡುವೆ ಹರಡಿದೆ ಮತ್ತು ಅವರ ದೈನಂದಿನ ಬದುಕುಗಳಲ್ಲಿ ಜೀವಂತ ಶಕ್ತಿಯಾಗಿದೆ. ಇದು ನಡೆದುದು ಹೇಗೆ? ಸಂತರ ಮೂಲಕ. ಅತ್ಯಂತ ದರಿದ್ರರ ಮತ್ತು ನಿಕೃಷ್ಟರ ಬಾಗಿಲುಗಳಿಗೆ ಬದುಕಿನ ಊಣಿಸನ್ನು ಮತ್ತು ಆಧ್ಯಾತ್ಮಿಕ ಜ್ಞಾನದ ಜ್ಯೋತಿಯನ್ನೂ ಒಯ್ಯುವವರು ಸಂತರು. ಕರ್ಣಾಟಕದ ಕೀರ್ತಿ ಯಾವುದೆಂದರೆ, ಸಾಮಾನ್ಯ ಜನತೆಯಲ್ಲಿ ಅಧ್ಯಾತ್ಮ ಹಾಗೂ ನೈತಿಕ ಮೌಲ್ಯಗಳನ್ನು ಹರಡುವಲ್ಲಿ ಪ್ರಮುಖ ಪಾತ್ರ ವಹಿಸಿದ ವೈಷ್ಣವ ಮತ್ತು ಶೈವ ಎರಡೂ ಪರಂಪರೆಗಳ ಬಹಳಷ್ಟು ಮಹಾಸಂತರಿಗೆ ಅದು ಜನ್ಮ ಕೊಟ್ಟುದುದು.

ಅಡುಗೆಮನೆಯಲ್ಲಿ ಎರಡುವರ್ಷ ಕಾಲ ಕೆಲಸ ಮಾಡಿದ ನಂತರ, ಪೂಜ್ಯ ಯತೀಶ್ವರಾನಂದಜಿ ಮಹಾರಾಜ್ ಅವರು ತರಕಾರಿ ತೋಟ ಮತ್ತು ಹಣ್ಣಿನ ತೋಟವನ್ನು ನೋಡಿಕೊಳ್ಳಲು ನನ್ನನ್ನು ಜಮೀನಿಗೆ ಕಳುಹಿಸಿದರು. ಪೂಜ್ಯ ಸುರೇಶಾನಂದಜಿ ಮಹಾರಾಜ್ ಕಟ್ಟಿದ ಕುಟೀರದಲ್ಲಿ ನಾನು ಉಳಿದುಕೊಂಡೆ. ಆ ಕಾಲದಲ್ಲಿ ಅವರ ಕಠಿಣ, ಶಿಸ್ತುಬದ್ಧ ಜೀವನ ನಮಗೊಂದು ಸ್ಫೂರ್ತಿಯ ಆಕರವಾಗಿತ್ತು. ಆ ಸ್ಥಳದಲ್ಲಿ ಸುಮಾರು ಹದಿನೈದು ವರ್ಷ ಇದ್ದ ನನ್ನ ವಾಸದ ಅವಧಿಯಲ್ಲಿ ಜಮೀನಿನಲ್ಲಿ ಕೆಲಸ ಮಾಡುವ ಕಾರ್ಮಿಕರ ಜತೆ ಕೆಲಸಮಾಡುವ ಸದವಕಾಶ ನನಗೆ ಸಿಕ್ಕಿತು. ಅವರು ದಟ್ಟದರಿದ್ರರು, ಆದರೆ ಮೃದುಸ್ವಭಾವದವರು, ಗುಣವಂತರು, ಪ್ರೀತಿಯುತರು ಹಾಗೂ ಉಪಕಾರಿಗಳು. ಜೀವನದ ಬಗ್ಗೆ ನನಗೆ ಬಹಳಷ್ಟು ಕಲಿಸಿದ ಆ ಬಡಜನರ ಅವಿಸ್ಮರಣೀಯ ಕರುಣಪೂರ್ಣ ನೆನಪುಗಳು ನನ್ನಲ್ಲಿವೆ. ಅವರ ಬದುಕುಗಳು ಕರ್ಣಾಟಕದ ಆಧ್ಯಾತ್ಮಿಕ ಅಚ್ಚಿನಲ್ಲಿ ಅಂತರ್ಗತವಾಗಿದ್ದುವು. ಹಿಂದಿನ ಸಂತರ ಪ್ರಭಾವ ಅವರ ಧಮನಿಗಳಲ್ಲಿ ಇನ್ನೂ ಮಿಡಿಯುತ್ತಿದ್ದ ದೃಶ್ಯ ಹೃದಯಸ್ಪರ್ಶಿಯಾಗಿತ್ತು. ಸ್ಥಳಾವಕಾಶ ಪರಿಮಿತಿಯಿಂದಾಗಿ, ಒಂದೇ ಒಂದು ಸಣ್ಣ ಘಟನೆಯನ್ನು ನಿರೂಪಿಸುತ್ತೇನೆ.

ನನ್ನ ಕುಟೀರವಾಸದ ಮೊದಲ ದಿವಸ ನಟ್ಟಿರುಳು ಮಧುರವಾದ ಹಾಡೊಂದರ ರಾಗದಿಂದ ನನ್ನ ನಿದ್ರಾಭಂಗವಾಯಿತು. ನಾನು ಕೊಠಡಿಯಿಂದ ಹೊರಬಂದೆ. ಚಂದ್ರೋದಯವಾಗಿತ್ತು; ಇಡೀ ತೋಟ ಬೆಳ್ದಿಂಗಳ ಪ್ರವಾಹ

ದಿಂದ ಯಕ್ಷಲೋಕವಾಗಿ ಮಾರ್ಪಟ್ಟಿತ್ತು. ಅದರೆ ಹಾಡು ಎಲ್ಲಿಂದ ಬರುತ್ತಿತ್ತು? ನಾನು ಹಾಡಿನ ದಿಕ್ಕಿನಲ್ಲಿ ನಡೆದೆ; ಕಡೆಗೆ ನಮ್ಮ ರಾತ್ರಿ ಕಾವಲುಗಾರ ರಂಗ (ಅಡ್ಡಹೆಸರು: ಕುಳ್ಳ ರಂಗ) 'ಶ್ರೀಮಾತೆಯ ಶಿಲೆ'ಯ ಒಂದು ಚಾಚಿನ ಮೇಲೆ ಕುಳಿತು, ತುಂಬುಗೊರಳಿನ ಇಂಪಿನಲ್ಲಿ

**"ಕಂಗಳಿದ್ಯಾತಕೊ, ಕಾವೇರಿರಂಗನ ನೋಡದ"**

ಎಂದು ಹಾಡುತ್ತ ತನ್ನ ಹೃದಯವನ್ನು ಅಭಿವ್ಯಕ್ತಿಸುತ್ತಿದ್ದುದನ್ನು ಕಂಡೆ.

**ಮೂರು ಮಹಾ ಪ್ರಾರ್ಥನೆಗಳು**

ಶ್ರೀರಾಮಕೃಷ್ಣರು ಮತ್ತು ಸ್ವಾಮಿ ವಿವೇಕಾನಂದರು ಸ್ಥಾಪಿಸಿದ ನೂತನ ಸಂನ್ಯಾಸದ ಆದರ್ಶವನ್ನು, ಕರ್ನಾಟಕದ ಹಿತಕರ ಆಧ್ಯಾತ್ಮಿಕ ಸಂಸ್ಕೃತಿಯಲ್ಲಿ ಬೇರೂರಿದ ಶ್ರೀರಾಮಕೃಷ್ಣ ಮಠದ ಅನುಕೂಲ ಪ್ರಶಾಂತ ವಾತಾವರಣದಲ್ಲಿ, ಪ್ರದೀಪ್ತಾತ್ಮರೊಂದರ ಮಾರ್ಗದರ್ಶನದಲ್ಲಿ ಒಬ್ಬ ಹೊಸಶಿಷ್ಯನಾಗಿ ಅರ್ಥಮಾಡಿಕೊಂಡು ಅನುಷ್ಠಾನಕ್ಕೆ ತರಲು ನಾನು ಮಾಡಿದ ಪ್ರಯತ್ನವನ್ನು ಕುರಿತದ್ದು, ಈ ಲೇಖನ. ಈ ಸಂಬಂಧದಲ್ಲಿ, ಆ ದಿನಗಳ ಎಲ್ಲ ಸೋದರಸಂನ್ಯಾಸಿಗಳಿಂದ ವಿವಿಧ ರೂಪಗಳಲ್ಲಿ ನಾನು ಪಡೆದ ಉದಾರ ಪ್ರೀತಿ, ಸಹಾನುಭೂತಿ, ಸಹಾಯಗಳನ್ನು ಕೃತಜ್ಞತೆಯಿಂದ ಸ್ಮರಿಸುತ್ತೇನೆ.

ಪೂಜ್ಯ ಸ್ವಾಮಿ ಯತೀಶ್ವರಾನಂದಜಿ ಮಹಾರಾಜ್ ಅವರ ಮೂರು ಪ್ರಾರ್ಥನೆಗಳ ಉಲ್ಲೇಖದಿಂದ ಈ ಲೇಖನವನ್ನು ಮುಗಿಸಬಯಸುತ್ತೇನೆ. ಒಮ್ಮೆ ಪೂಜ್ಯ ಮಹಾರಾಜ್ ನನಗೆ ಹೇಳಿದರು: "ಪ್ರತಿ ದಿವಸ ಮೂರು ಪ್ರಾರ್ಥನೆಗಳನ್ನು ಶ್ರೀಗುರುಮಹಾರಾಜರಿಗೆ ನಾನು ಸಲ್ಲಿಸುತ್ತೇನೆ:

**ಭಗವಾನರ ಪೂಜೆ ಈ ದೇವಾಲಯದಲ್ಲಿ**
**ನಿರಾತಂಕವಾಗಿ ನಡೆಯಲಿ!**
**ಆಶ್ರಮದ ಸೋದರರು ಶಾಂತಿಯಲ್ಲಿ ಬದುಕಲಿ!**
**ಇಲ್ಲಿಗೆ ಬರುವ ಭಕ್ತರಿಗೆ ಶಾಂತಿ ದೊರಕಲಿ!"**

ಈ ಮೂರು ಮಹಾಪ್ರಾರ್ಥನೆಗಳೆಲ್ಲ ಇಂದಿಗೂ ಬಹುಮಟ್ಟಿಗೆ ಈಡೇರುತ್ತಿವೆ ಎಂಬುದನ್ನು ಈ ಆಶ್ರಮದ ಸಾಹಚರ್ಯವುಳ್ಳ ಪ್ರತಿಯೊಬ್ಬರೂ ಬಲ್ಲರು.

❋

# ಪ್ರಹಸನ ಪ್ರಸಂಗ



ಉತ್ಸವದ ಸಮಯದಲ್ಲಿ ಹುಲಿಯ ವೇಷ ಹಾಕಿಕೊಂಡಿದ್ದವನನ್ನು ಕಂಡು ಮಗು ಬೆದರಿ ತನ್ನ ತಾಯಿಯನ್ನು ಕೇಳಿತು, "ಅವನು ನಮ್ಮನ್ನು ತಿಂದುಬಿಡುವುದೇ?" ತಾಯಿ ಹೇಳಿದಳು, "ಇಲ್ಲ ಅದರಲ್ಲೆಲ್ಲ ಮನುಷ್ಯರೇ ಇದ್ದಾರೆ!" ಆಗ ಆ ಮಗು, "ಓಹೋ! ಆಗಲೇ ತಿಂದುಬಿಟ್ಟಿದೆಯಾ?" ಎಂದು ಮತ್ತಷ್ಟು ಭಯಗೊಂಡಿತು!

* * *

ಒಬ್ಬ ವ್ಯಕ್ತಿ ವೈದ್ಯನ ಕೋಣೆಯನ್ನು ಪ್ರವೇಶಿಸಿದ. ಆ ವ್ಯಕ್ತಿಯ ಮೂಗಿನಲ್ಲಿ ಸೌತೇಕಾಯಿಯಿತ್ತು. ಒಂದು ಕಿವಿಯಲ್ಲಿ ಕ್ಯಾರೆಟ್ ಮತ್ತೊಂದರಲ್ಲಿ ಬಾಳೆಯ ಹಣ್ಣು ತುರುಕಲಾಗಿತ್ತು. ತಪಾಸಣೆಯ ಬಳಿಕ ಆ ವ್ಯಕ್ತಿ "ನನ್ನ ಸಮಸ್ಯೆ ಏನು ಡಾಕ್ಟರ್?" ಎಂದು ಪ್ರಶ್ನಿಸಿದ. ವೈದ್ಯ ಹೇಳಿದ, "ಏನಿಲ್ಲ! ನೀವು ಸರಿಯಾಗಿ ತಿನ್ನುತ್ತಿಲ್ಲ, ಅಷ್ಟೆ."

* * *

ಸೈನಿಕರು ಊಟಮಾಡುವ ಅಡುಗೆಮನೆಯ ಗೋಡೆಯ ಮೇಲೆ ಯಾರೋ ಗೀಚಿದ್ದರು: "ಇಲ್ಲಿ ದೊರೆಯುವ ಊಟ ಚೆನ್ನಾಗಿರಲೇಬೇಕು. ಹತ್ತುಸಾವಿರ ನೊಣಗಳು ಸುಳ್ಳು ಹೇಳುವುದು ಸಾಧ್ಯವಿಲ್ಲ!"

* * *

ಬಾಲಕನೊಬ್ಬ ತಾತನ ಕಾಲದ ಗಡಿಯಾರವನ್ನು ರಿಪೇರಿ ಮಾಡಿಸಬೇಕೆಂದು ರಸ್ತೆಯಲ್ಲಿ ಹೋಗುತ್ತಿದ್ದ. ಅದು ಎಷ್ಟು ದೊಡ್ಡದಾಗಿತ್ತೆಂದರೆ ಅವನಿಗೆ ರಸ್ತೆಯೇ ಕಾಣುತ್ತಿರಲಿಲ್ಲ. ರಸ್ತೆಯಲ್ಲಿ ಬರುತ್ತಿದ್ದ ವ್ಯಕ್ತಿಯೊಬ್ಬನಿಗೆ ಢಿಕ್ಕಿ ಹೊಡೆದಾಗ ಆತ ತನ್ನ ಕೈಯಲ್ಲಿದ್ದ ಪದಾರ್ಥಗಳೊಡನೆ ನೆಲದ ಮೇಲೆ ಬಿದ್ದುಬಿಟ್ಟ. ಹುಡುಗ ಕ್ಷಮೆ ಕೇಳಿದಾಗ ಆ ವ್ಯಕ್ತಿ ಹೇಳಿದ "ಅಲ್ಲಯ್ಯಾ! ನೀನೇಕೆ ಇದರ ಬದಲಿಗೆ ಕೈಗಡಿಯಾರ ಕಟ್ಟಿಕೊಳ್ಳಬಾರದು?"

* * *

**ತಂದೆ :** ನಮ್ಮ ಮಗ ಬಹಳ ಒಳ್ಳೆಯ ರಾಜಕಾರಣಿಯಾಗುವುದರಲ್ಲಿ ಸಂಶಯವೇ ಇಲ್ಲ.

**ತಾಯಿ:** (ಸಂತೋಷದಿಂದ) ಯಾವ ಆಧಾರದ ಮೇಲೆ ಹಾಗೆ ಹೇಳುತ್ತೀರಿ?

**ತಂದೆ:** ಸಂದೇಹವೇ ಇಲ್ಲ. ಕೇಳಲು ಸೊಗಸಾದ, ಆದರೆ ಸಂಪೂರ್ಣ ಅರ್ಥಹೀನವಾದ ಮಾತುಗಳನ್ನು ಎಷ್ಟು ಚೆನ್ನಾಗಿ ಆಡುತ್ತಾನೆ! ಇಂತಹ ಮಕ್ಕಳನ್ನು ನಾನು ಕಂಡೇ ಇಲ್ಲ.

* * *